ಟೀವಿ ಮತ್ತು ದಿನಪತ್ರಿಕೆಯಲ್ಲಿ ಮಾತ್ರ ನೋಡಿರುವ ತನಗೆ ನೇರಾನೇರಾ ಅವರನ್ನು ಕಾಣುವ ಭಾಗ್ಯವನ್ನು ಒದಗಿಸಿಕೊಟ್ಟ ನಾಸಿರ್ ಬಗ್ಗೆ ಅವನಿಗೆ ಅಭಿಮಾನ ಉಕ್ಕಿ ಬಂದಿತು. ಅಂತಹ ದೊಡ್ಡ ಮನುಷ್ಯರು ಖುದ್ದು ನಿಂತು ಮಾಡುತ್ತಿರುವ ಮದುವೆಗೆ ಇವನು ಜಮೀನು ಬೇರೆ ಯಾಕೆ ಮಾರಾಟ ಮಾಡಬೇಕಿತ್ತು ಎಂದು ಅವನು ಆಲೋಚಿಸಿದ. ಅಷ್ಟೇ ಅಲ್ಲದೆ, ಜಮೀನು ಮಾರಾಟ ಮಾಡಿ ಮೋಟರ್ ಸೈಕಲ್ ಕೊಡಿಸಿ ಮದುವೆಯನ್ನು ಮಾಡುವಷ್ಟು ಯೋಗ್ಯತೆಯುಳ್ಳ ಹುಡುಗ ಅವನಲ್ಲ ಎಂದೆನಿಸಿತು ಖಲಂದರ್‌ಗೆ. ಮೋಟಾರ್ ಬೈಕನ್ನು ಏರಿ ಸದಾ ಬೀದಿ ನಾಯಿಯಂತೆ ಸುತ್ತುವುದನ್ನು ಬಿಟ್ಟರೆ ಆ ಹುಡುಗನಿಗೆ ಬೇರೆ ಕೆಲಸವೇ ಇರಲಿಲ್ಲ. ಖಲಂದರ್‌ನ ಮನಸು ಅಸ್ತವ್ಯಸ್ತವಾಯಿತು. ಬೆಂಗಳೂರಿನಲ್ಲಿ ಕೆಲಸ ಅಂತ ಹೇಳಿಕೊಂಡು ಸದಾ ಹಾಸನದ ಬೀದಿ ಬೀದಿಯಲ್ಲಿ ಸುತ್ತಾಡುತ್ತಿದ್ದ ಆ ಹುಡುಗನಿಗೆ ಕೆಲಸವಾದರೂ ಇದೆಯೇ ದುಡಿಯುವ ಮಾರ್ಗವಾದರೂ ಇದೆಯೇ ಎಂದು ಅವನು ತನ್ನದೇ ಲೋಕದಲ್ಲಿ ಕಳೆದು ಹೋದ. ಭಾರತದ ಮಾಜಿ ಪ್ರಧಾನಿಗಳ ಆಪ್ತ ವರ್ಗಕ್ಕೆ ಸೇರಿದ ನಾಸೀರ್ ಅವರ ಕೈಕಾಲು ಹಿಡಿದು ಅಳಿಯನಿಗೆ ಒಂದು ಸರ್ಕಾರಿ ಕೆಲಸವನ್ನು ಕೂಡ ಕೊಡಿಸಬಹುದು. ಯಾರಿಗೆ ಗೊತ್ತು? ಎಂದು ತನ್ನನ್ನು ತಾನೆ ಸಮಾಧಾನಪಡಿಸಿಕೊಂಡ ಕೂಡ. ಆದರೂ ಹೆಣ್ಣುಮಕ್ಕಳು ನೆಮ್ಮದಿಯಾಗಿ ಬದುಕಬೇಕು. ಪಾಪ, ತಂದೆ ತಾಯಿಯರು ಹೊಟ್ಟೆ ಬಟ್ಟೆ ಕಟ್ಟಿ ಸಾಕಿ, ಮನೆ, ಜಮೀನು ಮುಂತಾಗಿ ಮಾರಾಟ ಮಾಡಿ ಮದುವೆ ಮಾಡೋದು ಸಾರ್ಥಕವಾದರೆ ಸಾಕು ಎಂದುಕೊಂಡು, ಆ ಉರಿ ಬಿಸಿಲಿನಲ್ಲಿಯೂ ಆಕೆ ತಂಪಾಗಿ ಇರಲೆಂದು ಹಾರೈಸಿದ.

ಖಲಂದರ್ ಎಷ್ಟೇ ಪೂರ್ವ ತಯಾರಿಯನ್ನು ಮಾಡಿಕೊಂಡಿದ್ದರೂ ಆ ಮದುವೆಗೆ ಹೋಗಲು ಸಾಧ್ಯವಾಗಲೇ ಇಲ್ಲ. ಏನೋ ಒಂದು ಅಡಚಣೆ... ಮತ್ತೊಂದು ತೊಡಕು. ಈ ಸ್ವಂತ ವ್ಯವಹಾರವೇ ಹಾಗೆ ಎಂದು ಅವನು ಅಲವತ್ತುಕೊಂಡ. ಆದರೆ, ಮದುವೆ ಅದ್ದೂರಿಯಾಗಿ ನಡೆಯಿತು ಎಂದು ಅವರಿವರ ಬಾಯಿಂದ ಕೇಳಿದ. ಕೊನೆಗೂ ಜೀವ ತಡೆಯಲಾಗದೇ ಮದುವೆಗೆ ಹೋಗಿದ್ದವರ ಪೈಕಿ ಕೆಲವರ ಬಳಿ ವಿವರಗಳನ್ನು ಪಡೆದುಕೊಂಡ. ರಾತ್ರಿಯ ನಮಾಜ್ ಮುಗಿದ ಅನಂತರ ಮಸೀದಿಯ ಹೊರ ಬಾಗಿಲಲ್ಲಿ ಸಿಕ್ಕಿದ ಶಬ್ಬೀರ್‌ನನ್ನು ಪಕ್ಕಕ್ಕೆ ಕರೆದು ಪಿಸುಮಾತಿನಲ್ಲಿ, "ಗೌಡ್ರು ಮದುವೆಗೆ ಬಂದಿದ್ದರಾ?" ಎಂದು ಕೇಳಿದ. ಹುಬ್ಬೇರಿಸಿದ ಶಬ್ಬೀರ್, "ಯಾವ ಗೌಡರು?" ಎಂದು ಕೇಳಿದ. "ಭಾರತದ ಮಾಜಿ ಪ್ರಧಾನ ಮಂತ್ರಿಗಳು." "ಅವರು ಯಾಕೆ ಬರುತ್ತಾರೆ ನಾಸಿರ್, ಮನೆ ಮದುವೆಗೆ. ನಿನಗೆಲ್ಲೋ ಹುಚ್ಚು ಹಿಡಿದಿದೆ" ಎಂದು ಹೇಳಿ ಶಬ್ಬೀರ್ ಮುಂದೆ ಯಾವುದೇ ಮಾತಿಗೆ ಅವಕಾಶ ನೀಡದಂತೆ ಇಡೀ ಬೀಡಾವನ್ನು ದವಡೆಯಲ್ಲಿ ಇರುಕಿಸಿಕೊಂಡು ದಾಪುಗಾಲು ಹಾಕುತ್ತಾ ಮನೆಯತ್ತ ನಡೆದ. ಖಲಂದರಿಗೆ ಅಪಾರ ನಿರಾಶೆ ಆಯ್ತು. "ತಾನು ಆ ಮದುವೆಗೆ ಹೋಗದೆ ಇದ್ದುದೇ ಒಳ್ಳೆಯದಾಯಿತು" ಎಂದು ಅವನು ಅಂದುಕೊಂಡರೂ ಮನದಾಳದಲ್ಲಿ ಅಪಾರ ಕಿರಿಕಿರಿ ಎನಿಸಿತು. ಈ ಬಾರಿ ನಾಸಿರ್ ಬಂದರೆ ಅವನನ್ನೇ ಕೇಳಿ ತನ್ನ ಸಂದೇಹವನ್ನು ಪರಿಹಾರ ಮಾಡಿ ಕೊಳ್ಳಬೇಕು ಎಂದು ಅವನು ತೀರ್ಮಾನಿಸಿದ ಮತ್ತು ಅ ವಿಷಯವನ್ನು ಅಲ್ಲಿಗೇ ಮರೆತುಬಿಟ್ಟ.

ಸುಮಾರು ಹದಿನೈದು ದಿನಗಳ ಅನಂತರ ಅವನು ಘನಿಯ ಮನೆ ಮುಂಭಾಗದಲ್ಲಿ ಹೋಗುತ್ತಿದ್ದಾಗ ನಾಸೀರ್ ಬಾಡಿಗೆ ಕಾರಿನಲ್ಲಿ ಅಳಿಯ ಮತ್ತು ಮಗಳನ್ನು ಕರೆದುಕೊಂಡು ತನ್ನ ಮನೆಗೆ ಹೋಗುತ್ತಿದ್ದ. ಬಹುಮುಖ್ಯ ಕೆಲಸದಲ್ಲಿ ಮುತುವರ್ಜಿಯಿಂದ ತೊಡಗಿದ್ದರಿಂದ ನಾಸೀರ್ ಖಲಂದರ್ ಬಳಿ ಹೆಚ್ಚು ಮಾತನಾಡಲಿಲ್ಲ, ಬದಲಿಗೆ ಸಲಾಂ ಪಯಾಂ ಎಂದು ವ್ಯಾವಹಾರಿಕವಾಗಿ ಒಂದೆರಡು ಮಾತನಾಡಿ ತನ್ನ ದಾರಿಯನ್ನು ಹಿಡಿದ. ವ್ಯಾವಹಾರಿಕವಾದ ಆ ಭೇಟಿಯ ನಡುವೆ ಕೂಡ ಅವನು ನಾಸೀರ್‌ನ ಮಗಳನ್ನು ನೋಡಲು ಕಣ್ಣು ಹಾಯಿಸಿದ. ಇಂಥಾ ಚಂಗಲು ಹುಡುಗನ ಹೆಂಡತಿಯಾಗಿ ಬಂದವಳು ಎಷ್ಟು ಸುಂದರಿ ಮತ್ತು ಚಾಲಾಕಿ ಇರಬೇಕು ಎಂದು ಅವನು ಕಾಣಲು ಬಯಸುತ್ತಿದ್ದ. ಹುಡುಗಿ